‘ಹಾಗಾದರೆ ನಿನ್ನ ದಾರಿ ಇನ್ನೂ ಸುಲಭ ಆಯ್ತು. ಆ ನನ್ನ ಗೆಳೆಯನಿಗೆ ನೀನು ತಕ್ಕ ಸಹಯಾನಿಗ ಅನಿಸುತ್ತೆ. ನಾಳೆ ಅವನು ಬರುತ್ತಾನೆ. ಅವನ ಜೊತೆ ಹೊರಡಲು ಸಿದ್ಧನಾಗಿರು. ನನ್ನ ನಿವೃತ್ತಿಯೂ ಹತ್ತಿರ ಬಂತು. ನಿನಗೆ ದಾರಿ ತೋರುವುದು ನನ್ನ ಧರ್ಮ’.

ಮಧ್ಯ ರಾತ್ರಿ ಮೀರಿತ್ತು. ಕುಂಟನಿಗೆ ಏನೇನೋ ಕನಸು. ಮರುದಿನ ಆತ ಬಂದಿರಲಿಲ್ಲ. ಅವನು ಅದೆಲ್ಲಿಯ ಯಾವ ಅನಾಥ ಹೆಣವ ತನ್ನ ಶವ ಬಂಡಿಯಲ್ಲಿ ಹಾಕಿಕೊಂಡು ಅದಕ್ಕೊಂದು ದಾರಿ ತೋರಿಸಲು ಅದೆಲ್ಲಿ ಹೋಗಿದ್ದನೋ?. ವಿಚಿತ್ರ ಮನುಷ್ಯ. ಶವಗಳ ಹಸುಗೂಸುಗಳಂತೆ ತನ್ನ ಲಡಾಸಾದ ತಗಡಿನ ಗಾಡಿಯಲ್ಲಿ ಹಾಕಿಕೊಂಡು ಹೊರಟ ಎಂದರೆ ಅವನ ಪಾಲಿಗೆ ಅದೇ ಒಂದು ವಿಶ್ವಶಾಂತಿಯ ಮೆರವಣಿಗೆಯಂತೆ ಭಾಸವಾಗುತಿತ್ತು. ಶವ ಸಾಗಿಸುವುದೇ ಅವನ ಪರಮ ಸುಖ. ಯಾರ ಮುಖವನ್ನು ನೋಡುತ್ತಿರಲಿಲ್ಲ. ಅದು ಅವನ ಬಿಟ್ಟಿ ಕಾಯಕ. ಯಾವೊಬ್ಬರಿಂದಲೂ ಆ ಕಾಯಕಕ್ಕೆ ಮೂರು ಪೈಸೆಯನ್ನೂ ಪಡೆದವನಲ್ಲ. ಹೇಗೋ ಅಲ್ಲಿಇಲ್ಲಿ ಮೂರು ಕಾಸು ಸಿಗುತ್ತಿತ್ತು. ಅದನ್ನೆಲ್ಲ ಶವಸಂಸ್ಕಾರಕ್ಕೆ ಬಳಸುತ್ತಿದ್ದ. ಅವನಿಗೆ ಸಂಸಾರ ಇತ್ತೋ ಇಲ್ಲವೋ ಗೊತ್ತಿಲ್ಲ. ನಡುವಯಸ್ಕ. ಜೀವಂತ ಶವದಂತಿದ್ದ. ಇವನೇನಾದರೂ ಶವಗಳನ್ನು

ಮಾರುವ ದಂಧೆಯವನೇ; ಅಂಗಾಂಗಗಳ ಖದೀಮನೇ ಎಂದು ಪೋಲಿಸರು ಹಿಡಿದು ವಿಚಾರಿಸಿ, ಅಪರೂಪದವನು ಎಂದು ಬೆನ್ನುತಟ್ಟಿ ಬಿಟ್ಟಿದ್ದರು. ಅಂತೂ ಎಲ್ಲೆಲ್ಲೋ ಕೆಲಸ ಮುಗಿಸಿಕೊಂಡು; ಆಸ್ಪತ್ರೆಗಳ ಬಳಿ ಹೆಣ ಸಿಗುತ್ತವೆ ಎಂದು ಬಂದು ಸೆಕ್ಯೂರಿಟಿಯವನ ಮುಂದೆ ನಿಂತ. ‘ಇವತ್ತು ನಿನ್ನ

ಜೊತೆ ಹೆಣ ಕಳಿಸಲ್ಲ; ನಾಳೆ ದಾರಿಯಲ್ಲಿ ಹೆಣ ಆಗುವವನ ಕಳಿಸಿಕೊಡುವೆ’ ಎಂದ. ‘ಓಹೋ ಅದೂ ಒಂದು ಸುಖವೇ. ಅರ್ಧಜೀವ, ಅರ್ಧಶವದ ಮನುಷ್ಯರು ಅತೀತತೆಗಳ ಜೊತೆ ಚೆನ್ನಾಗಿ ಮಾತನಾಡಬಲ್ಲರು. ನನ್ನ ಕಂಡೀಷನ್ ಎಲ್ಲ ಹೇಳಿದ್ದೀರಲ್ಲಾ... ಒಪ್ಪಿದ್ದಾನೆ ತಾನೆ...’ ಎಂದು ವಿಚಾರಿಸಿಕೊಂಡ. ‘ನಾಳೆಯೇ ಹೊರಡಿ. ಅವನಿಗೂ ಎಲ್ಲ ಹೇಳಿರುವೆ. ಇವತ್ತು ನಾನು ಅವನನ್ನು ನನ್ನ ಮನೆಗೆ ಕರೆದೊಯ್ದು ಊಟ ಹಾಕಬೇಕಿದೆ... ಪಾಪಿ ಕುಂಟ’ ಎಂದು ಸವಾರನ ಜೊತೆ ಏನೇನೋ ಹೇಳಿದ. ಮರುದಿನ ನಿಖರ ಸಮಯಕ್ಕೆ ಸಾವಿನ ಬಂಡಿಯವನು ಬಂದು ಸೆಕ್ಯೂರಿಟಿಯವನ ಜೊತೆ ಬಿಸಿ ಚಹಾ ಸವಿಯುತ್ತಾ; ‘ಇವನೇ ಏನು ನನ್ನ ಜೊತೆ ಬರಲಿರುವ ಜೀವಂತ ಶವ’ ಎಂದು ಕೇಳಿದ. ಕುಂಟ ನಮಸ್ಕರಿಸಿ ಗಮನಿಸಿದ. ಬಂದವನ ಜೊತೆ ಹೊರಡಲು ಸಿದ್ಧನಾದ. ಉಟ್ಟ ಬಟ್ಟೆ ಅಷ್ಟೇ... ಅವನಿಗೆ ಯಾವ ಲಗೇಜು... ಶವದ ವಾಹನವ ಮುಟ್ಟಿ ಮಾತಾಡಿಸಿದ. ಇದೊಂಥರ ಐರಾವತ ಎನಿಸಿತು. ಇಬ್ಬರೂ ಬಹಳ ಕಾಲದಿಂದ ಒಬ್ಬರಿಗೊಬ್ಬರು ಕಾದಿದ್ದು ದಿವ್ಯಗಳಿಗೆಯಲ್ಲಿ ಬೆಟ್ಟಿ ಆದವರಂತೆ ಆತ್ಮೀಯರಾಗಿಬಿಟ್ಟರು.

ಆ ಶವದ ವಾಹನವೋ ಯಮದೂತನೇ ಇವರಿಗಾಗಿ ಮಾಡಿ ಕಳಿಸಿದಂತಿತ್ತು. ಶವ ಸಾಗಿಸುವ ಆತನ ವಂಶಿಕರು ಒಂದು ಕಾಲಕ್ಕೆ ಆಫ್ಘಾನಿಸ್ತಾನದವರು. ಪಠಾಣರ ಗತ್ತು ಅವನಲ್ಲಿ ತುಂಬಿತ್ತು. ಎಲ್ಲೋ ಅಪಘಾತವಾಗಿ ರಸ್ತೆಯಲ್ಲೇ ಬಿಸಾಡಿ ಹೋಗಿದ್ದ ಲಗೇಜು ಗಾಡಿಯನ್ನೇ ಆತ ಸ್ವಪ್ರತಿಭೆಯಿಂದ ಸರಿಪಡಿಸಿ ತನ್ನ ಕಾಯಕಕ್ಕೆ ಬಳಸಿ ಕೊಂಡಿದ್ದ. ಬಹಳ ಕಾಲದಿಂದ ಆ ಶವದ ವಾಹನವೇ ಅವನ ಸಂಸಾರವಾಗಿತ್ತು. ಆ ವಾಹನವೂ ಅಷ್ಟೇ ಅವನು ಹೇಳಿದಂತೆಲ್ಲ ಕೇಳುತ್ತಿತ್ತು. ಅದರ ಜೊತೆ ಮಾತಾಡುತ್ತಿದ್ದ. ಬಡಕಲಾದ ಆ ವಾಹನ ಅವನ ಜೊತೆ ಅದೆಷ್ಟೋ ಸಲ ಮುನಿಸಿಕೊಂಡು ನಿಂತು ಬಿಡುತ್ತಿತ್ತು. ಆಗ ಅದೇ ಅವನ ಮನೆಯಾಗಿ ಬಿಡುತ್ತಿತ್ತು. ಮೆಕ್ಯಾನಿಕ್‌ಗೆ ಸಂಬಂಧಿಸಿದ ಹತಾರಗಳನ್ನೆಲ್ಲ ಇಟ್ಟುಕೊಂಡಿದ್ದ. ಹೆಣ ಮಲಗಿಸುವ ಮುರುಕು ಸ್ಟ್ರೆಚ್ಚರ್ ಮೇಲೆ ಕುಂಟ ಸುಪ್ಪತ್ತಿಗೆಯಲ್ಲಿ ಮಲಗಿದಂತೆ ಅತ್ತಿತ್ತ ಹೊರಳಾಡಿದ. ಅದರಲ್ಲಿ ಎಂಥೆಂಥ ಹೆಣಗಳು ಮಲಗಿದ್ದವೋ... ಅವೆಲ್ಲ ಕುಂಟನಿಗೆ ಅಗತ್ಯ ಇಲ್ಲ. ಜೀವ– ಅಜೀವ ಅವನಿಗೆ ಉಸಿರಾಡಿದಷ್ಟು ಸಲೀಸಾಗಿತ್ತು. ಅವನು ಯಾವತ್ತೋ ಹುಟ್ಟಿದ್ದು ಎಂದೋ ಸತ್ತು ಹೋಗಿದ್ದ. ಜಗತ್ತಿನಲ್ಲಿ ಹುಟ್ಟು, ಸಾವಿಗೆ ಅರ್ಥವೇ ಇಲ್ಲದಂತಾಗಿತ್ತು. ಯಾಕಾಗಿ ಹುಟ್ಟಬೇಕು ಯಾರಿಗಾಗಿ ಸಾಯಬೇಕು ಎಂದು ಆ ಶವಗಳ ಸಾಗಿಸುವವನಿಗೂ ಬಹಳ ಸಲ ಕಾಡಿತ್ತು. ಕ್ಷಣ ಮಾತ್ರದಲ್ಲಿ ಅವನ ಜೀವ ಇವನಾಗಿ